


**ಎಡದಿಂದ ಬಲಕ್ಕೆ**

2 ಬಾಣಂತಿಯರಿಗಾಗಿ ಮಾಡುತ್ತಿದ್ದ ರಸಾಯನ 2
4 ನೀರು ಬತ್ತಿ ಹೋದಾಗ ಸಿಕ್ಕ ಅಡುಗೆ ಬಳಕೆಯ ಜಿನಸು 2
6 ಅದಿತಿ ಊದಿದ ಗಾಳಿಚೀಲ 2
7 ಅಮರಾವತಿ ಅರಸನಂತೆ ಕಂಡ ಕರಿರಾಜ 3
8 ಕಾದಿಹಳು ತಿನ್ನಲು ಧಾನ್ಯ 8
9 ಹಿಮಾಲಯ ಕಾಡುಗಳ ಹೋರಾಟಗಾರ ಈ ಅತಿ ಸುಸ್ವಭಾವಗಳ ಪರಿಸರವಾದಿ 4
11 ಪ್ರಯೋಜಕರು ನಿಧಿ ಹೊತ್ತು ತಲುಪಿದ ಕ್ಷೀರಸಾಗರ 4
13 ಆಕಾಶದಿಂದ ಕೇಳಿ ಬಂದ ಗುಡುಗು ಸಿಡಿಲುಗಳ ಶಬ್ದ 4
14 ಪಾರ್ವತಿ ಹೆಸರಿರಿಸಿಕೊಂಡ ಯಾಜ್ಞವಲ್ಕ್ಯ ಸತಿ 4
17 ರಮಣ ಹೊರಲಾರದಷ್ಟು ತೂಕದ ಪ್ರಮಾಣ 2
18 ಮಡಕೆ ಹೊತ್ತು ಬರುತ್ತಿರುವ ಸತಿ 3
19 ಬೇಸಿಗೆ ಸಮುದ್ರಸ್ನಾನಕ್ಕೆ ಹೆಸರಾದ ನೆರೆರಾಜ್ಯ 2
20 ರಾಮ ಬಿಟ್ಟರೆ ಗುರಿ ತಪ್ಪದ ಶರ 2
21 ಅಪಾಯ ತಪ್ಪಿಸಲು ಲಕ್ಷ್ಮಣ ಎಳೆದ ರೇಖೆ 2

**ಮೇಲಿನಿಂದ ಕೆಳಕ್ಕೆ**

1 ಕನ್ನಡಿಯಲ್ಲಿ ಪ್ರತಿ ಬಾರಿಯೂ ಕಾಣುವ ಛಾಯೆ 4
3 ಹರನ ಗಣಗಳಿಂದ ನಡೆದು ಹೋದ ಪ್ರಕರಣ 4
4 ದೇವಾಧಿಪತಿ ಹಿಡಿದ ಕಾಮನಬಿಲ್ಲು 4
5 ಹೆಣ್ಣಿನ ಭುಜ ಬಂಧಿಸಿದ ಆಭರಣ 4
10 ಹುಡುಕಾಟದಲ್ಲಿ ತೊಡಗಿದ ಬಾಲೆ 3
12 ಆಕಾಶವಾಣಿಗೂ ಒಂದು ನಿವಾಸ 3
13 ಅಂತರಾತ್ಮದ ಮುಂದೆ ಬಿಚ್ಚಿಡಬೇಕಾದ ರಹಸ್ಯ 4
14 ಕ್ರಮವಾಗಿ ಹೊರ ಹೋಗುವ ಷೋಡಶ ಸಂಸ್ಕಾರ 4
15 ಮಹಿಳೆ ನಡೆಯುವ ಅಂಗಕ್ಕೆ ಧರಿಸಿದ ನೂಪುರ 4
16 ಚರ್ಚಾಸ್ಪದವಲ್ಲದ ವಿಷಯದ ಬಗ್ಗೆ ಮಾತೇ ಬೇಡ 4

### 09–04–2026 ಉತ್ತರಗಳು

**ಎಡದಿಂದ ಬಲಕ್ಕೆ**

1. ಕರ್ಕಾಟಕ 3. ಮಹೋತ್ಸವ 5. ಲಾವಣಿ 6. ಗರುಡ 8. ಗಾವಿಲ 9. ಮಧುರಗಾನ 11. ಮೇರು 12. ಸಂಚು 14. ನಾದತರಂಗ 16. ಸರೋದ 17. ಮಯೂರಿ 18. ಪುನ್ನಾಗ 20. ನಗನಾಣ್ಯ 21. ವಿಶ್ವಮಾನ್ಯ

**ಮೇಲಿನಿಂದ ಕೆಳಕ್ಕೆ**

1. ಕಡುಗಲಿ 2. ಕಲಾ 3. ಮಣಿ 4. ವಕಾಲತ್ತು 7. ಡಮರುನಾದ 8.ಗಾನಸಂಗಮ 10. ರಜತ 13. ಹೊಸದಿನ 15. ಸಿರಿಧಾನ್ಯ 18. ಪುಣ್ಯ 19. ಗವಿ

■ ಅ.ನಾ. ಪ್ರಹ್ಲಾದರಾವ್

**ಮಹಿಳಾ ವಿಜ್ಞಾನಿ**

## ಭಾರತದಲ್ಲಿ ವೈದ್ಯ ವೃತ್ತಿ ಆರಂಭಿಸಿದ ಹೆಮ್ಮೆ

**ಡಾ. ಕಾದಂಬಿನಿ ಗಂಗೂಲಿ** (1861–1923) ಅವರು ಭಾರತದ ಮೊದಲ ಮಹಿಳಾ ಪದವೀಧರೆ ಮಾತ್ರವಲ್ಲದೆ, ಭಾರತದಲ್ಲಿ ವೈದ್ಯಕೀಯ ವೃತ್ತಿ ಆರಂಭಿಸಿದ ಮೊದಲ ವೈದ್ಯೆಯೂ ಹೌದು. ಇವರು ಮಹಿಳಾ ಹಕ್ಕುಗಳ ಹೋರಾಟಗಾರ್ತಿಯಾಗಿ ಮತ್ತು ಸಮಾಜ ಸುಧಾರಕಿಯಾಗಿಯೂ ಗುರುತಿಸಿಕೊಂಡಿದ್ದಾರೆ. ಆನಂದಿಬಾಯಿ ಜೋಷಿ ಅವರ ಕಾಲದಲ್ಲಿಯೇ ವಿದೇಶಕ್ಕೆ ಹೋಗಿ ವೈದ್ಯಕೀಯ ಪದವಿ ಪಡೆದ ಮತ್ತೊಬ್ಬ ಮಹಿಳೆ ಕಾದಂಬಿನಿ ಗಂಗೂಲಿ. ಕಲ್ಕತ್ತಾ ವಿಶ್ವವಿದ್ಯಾಲಯದಿಂದ ಪದವಿ ಪಡೆದ ಮೊದಲ ಇಬ್ಬರು ಮಹಿಳೆಯರಲ್ಲಿ ಇವರೂ ಒಬ್ಬರು (ಮತ್ತೊಬ್ಬರು ಚಂದ್ರಮುಖಿ ಬಸು). ಇದು ಇಡೀ ದಕ್ಷಿಣ ಏಷ್ಯಾದಲ್ಲೇ ಮಹಿಳಾ ಶಿಕ್ಷಣಕ್ಕೆ ಸಂದ ಮೊದಲ ದೊಡ್ಡ ಜಯವಾಗಿತ್ತು.

ಕಲ್ಕತ್ತಾ ಮೆಡಿಕಲ್ ಕಾಲೇಜಿನಲ್ಲಿ ಸೀಟು ಪಡೆಯಲು ಇವರು ದೊಡ್ಡ ಹೋರಾಟವನ್ನೇ ಮಾಡಬೇಕಾಯಿತು. ಸಮಾಜದ ವಿರೋಧದ ನಡುವೆಯೂ 1886ರಲ್ಲಿ ವೈದ್ಯಕೀಯ ಪದವಿ (GBMC) ಪಡೆದರು. ಆನಂದಿಬಾಯಿ ಜೋಷಿ ಅವರು ವಿದೇಶದಲ್ಲಿ ಪದವಿ ಪಡೆದರೆ, ಕಾದಂಬಿನಿ ಅವರು ಭಾರತದಲ್ಲೇ ಶಿಕ್ಷಣ ಪಡೆದ ಮೊದಲ ಮಹಿಳಾ ವೈದ್ಯೆಯಾಗಿದ್ದಾರೆ. ವೈದ್ಯಕೀಯ ಕೋರ್ಸ್ ಮುಗಿಸಿದ ನಂತರ ಇಂಗ್ಲೆಂಡ್‌ಗೆ ತೆರಳಿ ಅಲ್ಲಿನ 'ರಾಯಲ್ ಕಾಲೇಜ್ ಆಫ್ ಫಿಸಿಷಿಯನ್ಸ್' ಮತ್ತು 'ರಾಯಲ್ ಕಾಲೇಜ್ ಆಫ್ ಸರ್ಜನ್ಸ್'ನಿಂದ ಉನ್ನತ ಪದವಿಗಳನ್ನು ಪಡೆದರು.



ಸಮಾಜ ಸೇವೆ ಮತ್ತು ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದ ಕಾದಂಬಿನಿ ಕಲ್ಲಿದ್ದಲು ಗಣಿಗಳಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯರ ಶೋಷಣೆಯ ವಿರುದ್ಧ ಧ್ವನಿ ಎತ್ತಿದ್ದರು. ಮಹಿಳೆಯರ ಆರೋಗ್ಯ ಮತ್ತು ಪ್ರಸವ ಚಿಕಿತ್ಸೆಯಲ್ಲಿ ಸುಧಾರಣೆ ತರಲು ನಿರಂತರವಾಗಿ ಶ್ರಮಿಸಿದರು. ರಾಜಕೀಯಕ್ಕೂ ಕಾಲಿಟ್ಟು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನದಲ್ಲಿ ಭಾಷಣ ಮಾಡಿದ್ದರು.

ಎಂಟು ಮಕ್ಕಳ ತಾಯಿಯಾಗಿಯೂ, ತಮ್ಮ ವೃತ್ತಿ ಜೀವನ ಮತ್ತು ಸಮಾಜ ಸೇವೆಯನ್ನು ಸಮರ್ಥವಾಗಿ ನಿಭಾಯಿಸಿದ್ದರು. ಇವರ ಜೀವನ ಆಧಾರಿತ 'ಪ್ರೊಥೋಮಾ ಕಾದಂಬಿನಿ' ಎಂಬ ಜನಪ್ರಿಯ ಕಿರುತೆರೆ ಸರಣಿ ಧಾರಾವಾಹಿ ಬೆಂಗಾಲಿ ಭಾಷೆಯಲ್ಲಿ ನಿರ್ಮಾಣವಾಗಿದೆ.

### ಅಗ್ನಿಪುತ್ರಿ ಟೆಸ್ಸಿ ಥಾಮಸ್

ಭಾರತದ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಯಲ್ಲಿ (DRDO) ಮಹತ್ವದ ಸಾಧನೆ ಮಾಡಿರುವ ಟೆಸ್ಸಿ ಥಾಮಸ್ ಭಾರತದ ಮಿಸೈಲ್ ವುಮನ್ ( ಕ್ಷಿಪಣಿ ಮಹಿಳೆ) ಎಂದೇ ಖ್ಯಾತರಾಗಿದ್ದಾರೆ. ದೇಶದ ಕ್ಷಿಪಣಿ ಯೋಜನೆಯೊಂದರ ನೇತೃತ್ವ ವಹಿಸಿದ ಭಾರತದ ಮೊದಲ ಮಹಿಳಾ ವಿಜ್ಞಾನಿ ಎಂಬ ಹೆಗ್ಗಳಿಕೆ ಇವರದ್ದು.

ಭಾರತ ರೂಪಿಸಿದ ಅತ್ಯಾಧುನಿಕ 'ಅಗ್ನಿ' (Agni) ಸರಣಿಯ ಕ್ಷಿಪಣಿಗಳ ವಿನ್ಯಾಸ ಮತ್ತು ಅಭಿವೃದ್ಧಿಯಲ್ಲಿ ಇವರು ಮಹತ್ವದ ಕೆಲಸ ಮಾಡಿದ್ದಾರೆ.

■ ಗುರುರಾಜ್ . ಎಸ್ ದಾವಣಗೆರೆ